ದಿನಾಂಕ: 07.09.2022ರಂದು ಬೆಳ್ಳಿಗ್ಗೆ 10.00 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 09.09.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಅನಿಕೇಶ್, ಕಿ.ಆ.ಪ
3. ಶ್ರೀ ಚನ್ನಕೇಶವ ಮರ್ಷಲ್
4. ಶ್ರೀ ಪುಟ್ಟಸ್ವಾಮಿ, ತೋಟಗಾರಿಕೆ ಇಲಾಖೆ
5. ಶ್ರೀ ಹುಸೇನ್ ಭಾಷ, ಪೋಲಿಸ್ ಕಾನ್ಸ್ ಟೇಬಲ್
6. ಶ್ರೀ ಹೆಚ್.ಎಲ್. ರಮೇಶ್, ಬೆಸ್ಕಾಂ
7. ಶ್ರೀ ಮಹೇಶ್ ಸದಸ್ಯರು
8. ಶ್ರೀ ಪವನ್. ಕೆ.ಎಂ. ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.
9. ಶ್ರೀ ರಾಜೇಂದ್ರ, ಕೆ.ಎಂ. ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.
10. ಶ್ರೀ ವಿಜಯ್ ಕುಮಾರ್
11. ಶ್ರೀ ಮಹೇಶ್.ಬಿ.ಜೆ. ಎಸ್.ಡ್ಬ್ಲ್ಯೂ.ಎಂ.
12. ಶ್ರೀ ಆನಂದ್, ಎಇ. ಬೆಸ್ಕಾಂ
13. ಶ್ರೀ ಸುಬ್ರಮಣ್ಯ, ಕರ ವಸೂಲಿಗಾರ
14. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
15. ಶ್ರೀ ಶಿವರಾಮ್, ಆರ್.ಎಫ್. ಅರಣ್ಯ
16. ಶ್ರೀ ದಿಲೀಪ್,
17. ಶ್ರೀ ಕಣ್ಣಯ್ಯ
18. ಶ್ರೀ ಎಮ್. ಗುಬ್ಬಣ್ಣ
19. ಡಿ. ಮಂಜುನಾಥ್
20. ಶ್ರೀ ಆನಂದ್ .ಪಿ.ಸಿ. ಎಇ. ವಿದ್ಯುತ್

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್, ಮಂಜುನಾಥನಗರ, ಶಿವನಗರ, ಮಹಾಗಣಪತಿನಗರ ಹಾಗೂ 5ನೇ ಬ್ಲಾಕ್ ನಲ್ಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಮ್ಯಾನ್ ಹೋಲ್ ಗಳಲ್ಲಿ ಮರದ ಬೇರುಗಳು ಮತ್ತು ಇತರ ತ್ಯಾಜ್ಯ ವಸ್ತುಗಳು ಸಂಗ್ರಹಗೊಂಡು ಒಳಚರ್ಂಡಿ ಪೈಪ್ ಗಳು ಬ್ಲಾಕ್ ಆಗಿ ಅಲ್ಲಲ್ಲಿ ಉಕ್ಕಿ ಹರಿಯುವುದನ್ನು ಸಾರ್ವಜನಿಕರು ಸಭೆಗೆ ತಿಳಿಸಿದಾಗ . ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.ಸಿಬ್ಬಂದಿ ಮತ್ತು ಅಭಿಯಂತರರು ಸಭೆಯಲ್ಲಿ ಹಾಜರಿದ್ದು, ಅಂತಹ ಪ್ರಕರಣವನ್ನು ತುರ್ತಾಗಿ ಕೆಲಸ ನಿರ್ವಹಿಸಿ, ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡಲು ಸಭೆಗೆ ತಿಳಿಸಿರುತ್ತಾರೆ. ಒಂದು ವೇಳೆ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ನಮ್ಮ ಸಹಾಯ ವಾಣಿಗೆ ನಿಮ್ಮ ದೂರವಾಣಿ ಮುಖಾಂತರ ತಿಳಿಸಿದರೆ ತುರ್ತಾಗಿ ಕೆಲಸ ನಿರ್ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಪು.ತಿ.ನೋ.

Scanned by CamScanner

2. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್, ಮಂಜುನಾಥನಗರ, ಶಿವನಗರ, ಮಹಾಗಣಪತಿನಗರ ಹಾಗೂ 5ನೇ ಬ್ಲಾಕ್‌ನಲ್ಲಿ, ಕೆಲವು ಬೀದಿ ದೀಪಗಳು ದುರಸ್ತಿಗೊಂಡಿರುತ್ತದೆ. ಕೆಲವು ಬೀದಿ ದೀಪಗಳು ಮರದ ಕೊಂಬೆಯ ಮಧ್ಯೆ ಇರುವುದರಿಂದ ರಸ್ತೆಯಲ್ಲಿ ಕತ್ತಲು ಆವರಿಸಿಕೊಂಡು ಕೆಲವು ಭಾಗಗಳಲ್ಲಿ ಅನಧಿಕೃತ ಚಟುವಟಿಕೆಗಳು ನಡೆದಂತೆ ಸದಸ್ಯರು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ಅಭಿಯಂತರರು ಮತ್ತು ಬೀದಿ ದೀಪ ದುರಸ್ಥಿಪಡಿಸುವ ಗುತ್ತಿಗೆದಾರರು ಹಾಜರಾಗಿ ಅಂತಹ ಪ್ರಕರಣಗಳು ಕಂಡು ಬಂದಲ್ಲಿ ತುರ್ತಾಗಿ ದುರಸ್ಥಿಪಡಿಸಿ ಹಾಗೂ ಮರಗಳ ಮಧ್ಯೆ ಇರುವ ಬೀದಿ ದೀಪಗಳ ಬೆಳಕು ಸರಾಗವಾಗಿ ಬೀಳುವಂತೆ ಸಂಬಂಧಿಸಿದ ಅರಣ್ಯ ಸಿಬ್ಬಂದಿಯವರಿಗೆ ಹಂತ ಹಂತವಾಗಿ ತೆರವುಗೊಳಿಸುವಂತೆ ತಿಳಿಸಿದರು.

3. ಮಂಜುನಾಥನಗರ ಮತ್ತು ಶಿವನಗರ ಹಾಗೂ ಶಿವನಗರ, ಮಹಾಗಣಪತಿನಗರಗಳಲ್ಲಿ ಕೆಲವು ಭಾಗಗಳಲ್ಲಿ ಮರದ ಕೊಂಬೆಗಳು ಒಣಗಿದ್ದು, ಉನ್ನುಳಿದ ಮರದ ಕೊಂಬೆಗಳು ಬಾಗಿರುವುದರಿಂದ ಅಪಾಯ ಉಂಟಾಗಬಹುದೆಂದು ಸಾರ್ವಜನಿಕರು ಸಭೆಯಲಿ ತಿಳಿಸಿದಾಗ, ಸಭೆಯಲಿ ಹಾಜರಿದ್ದ ಅರಣ್ಯ ಇಲಾಖೆಯ ಅಧಿಕಾರಿಗಳು ಹಂತ ಹಂತವಾಗಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಕಟಾವು ಮಾಡಲಾಗುವುದೆಂದು ತಿಳಿಸಿದರು.

4. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಜಿಯೋ ಮತ್ತು ಏರ್ ಟೆಲ್ ಕೇಬಲ್‌ಗಳನ್ನು ಕ್ರಮ ಬದ್ಧವಾಗಿ ಅಳವಡಿಸದೆ ಆಯ್ದ ಭಾಗಗಳಲ್ಲಿ ರಸೆ ಕುಸಿತಗೊಂಡು ವಾಹನ ಸಂಚಾರರಿಗೆ ಮತ್ತು ಸಾರ್ವಜನಿಕರಿಗೆ ನಡೆದಾಡಲು ತೊಂದರೆಯಾಗಿದೆ ಎಂದು ಸದಸ್ಯರು ಒಕ್ಕಲರಿಂದ ತಿಳಿಸಿದಾಗ ಸಭೆಯಲಿ ಹಾಜರಿದ್ದ ವಾರ್ಡ್ ಅಭಿಯಂತರರು ಅಂತಹ ಸ್ಥಳವನು ಗುರುತಿಸಿ, ಸಂಬಂಧಿಸಿದ ಫರ್ಮ್ ಗಮನಕ್ಕೆ ತಂದು ಪುನಶ್ಚೇತನ ಗೊಳಿಸಿ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ತಿಳಿಸಿರುತ್ತಾರೆ.

3/9/2022

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner